

## ಯಾರಿದರ ಸೃಷ್ಟಿಕರ್ತ?

ನಾಲ್ಕು ಹನಿ ಮಳೆ ಧರೆಗೆ ಬಿದ್ದರೆ ಸಾಕು ತರಹೇವಾರಿ ಅಣಬೆಗಳು ತಲೆ ಎತ್ತುತ್ತವೆ. ಈ ಚಿತ್ರದಲ್ಲಿ ಕಾಣುತ್ತಿರುವುದೂ ಅಣಬೆ ಜಾತಿಯದ್ದೇ ಒಂದು ಕುಡಿ. ಅಣಬೆ, ನಾಯಿಕೊಡೆ ಎಂದು ಕರೆಸಿಕೊಳ್ಳುವ ಈ ಸಸ್ಯವರ್ಗ ಎಲ್ಲೆಂದರಲ್ಲಿ ತಲೆ ಎತ್ತುತ್ತವೆ. ಈಚೆಗೆ ಬಿದ್ದ ಪೂರ್ವ ಮುಂಗಾರು ಮಳೆಗೆ ನಮ್ಮ ತೋಟದಲ್ಲಿ ಕುಡಿಯೊಡೆದ ಶ್ವೇತ ಬಣ್ಣದ ಅಣಬೆಯಿದು. ನೋಡಲು ಶ್ರೀ ಕೃಷ್ಣನ ಸುದರ್ಶನ ಚಕ್ರದಂತೆ ಗೋಚರಿಸುತ್ತಿದ್ದು, ಎಲ್ಲರ ಕಣ್ಮನ ಸೆಳೆಯುತ್ತಿದೆ. ಅಣಬೆಗಳು ನಾನಾವಿಧದ ಆಕಾರ, ವಿನ್ಯಾಸ, ಬಣ್ಣ, ರೂಪಗಳನ್ನು ಪಡೆದು ಯಾವುದೇ ಗೊಬ್ಬರ–ಆರೈಕೆ ಬಯಸದೆ ಬೆಳೆಯುವ ಪರಿ ನಿಜಕ್ಕೂ ವಿಸ್ಮಯಕರ. ಇವುಗಳನ್ನು ನೋಡುವ ದೃಷ್ಟಿ, ಕಲ್ಪನೆಗಳು ಮಾತ್ರ ಅವರವರಿಗೆ ಬಿಟ್ಟದ್ದು.

–ಎನ್. ಕೃಷ್ಣಮೂರ್ತಿ ರಾವ್, ಬೆಂಗಳೂರು






## ಕೊಂಬೆಗೆ ಸಿಲುಕಿದ ವಾಹನ

ದಾವಣಗೆರೆಯ ಎಂ.ಸಿ.ಸಿ.ಬಿ ಬ್ಲಾಕ್ 11ನೇ ಮುಖ್ಯ ರಸ್ತೆಯಲ್ಲಿ ಮೇ ತಿಂಗಳ 21ರಂದು ಬೆಳಗಿನ ಜಾವ ವಾಹನವೊಂದು ರಸ್ತೆಗೆ ಅಡ್ಡವಾಗಿ, ಬಾಗಿ ಬೆಳೆದಿದ್ದ ಕೊಂಬೆಗೆ ಬಡಿದು ಮೇಲೇರಿ ಸಿಲುಕಿ ಹಾಕಿಕೊಂಡ ದೃಶ್ಯವಿದು. ಈ ಮರದ ಕೊಂಬೆಗೆ ಇದುವರೆಗೆ ಹಲವು ವಾಹನಗಳು ತಾಗಿ ಜಖಂಗೊಂಡಿವೆ. ಈ ರಸ್ತೆಯಲ್ಲಿ ಸಂಚರಿಸುವ ಸರಕು ಸಾಗಣೆ ವಾಹನಗಳಿಗೆ ಮತ್ತು ಬೃಹತ್ ವಾಹನಗಳಿಗೆ ಈ ಕೊಂಬೆ ಸಂಚಕಾರವಾಗಿದೆ. ನಾನು ಕಂಡಂತೆ ಈ ಕೊಂಬೆಗೆ ಸಿಲುಕಿ ಹೆಚ್ಚು ಹಾನಿಯಾದದ್ದು ಚಿತ್ರದಲ್ಲಿ ಕಾಣುತ್ತಿರುವ ಗೂಡ್ಸ್ ವಾಹನಕ್ಕೆ. ಸ್ಥಳೀಯ ನಿವಾಸಿಗಳ ಮನವಿ ಮೇರೆಗೆ ಸ್ಪಂದಿಸಿ ಮಹಾನಗರಪಾಲಿಕೆ ಸಿಬ್ಬಂದಿ ಕೂಡಲೇ ಧಾವಿಸಿ ತೆರವು ಮಾಡಿದರು. ಆದರೂ ಕೊಂಬೆಯ ಉಳಿದ ಭಾಗ ಎತ್ತರದ ವಾಹನಗಳಿಗೆ ಅಪಾಯಕಾರಿಯಾಗಿಯೇ ಇದೆ. ವಾಹನ ಸವಾರರು ಜಾಗರೂಕತೆಯಿಂದ ವಾಹನ ಚಲಾಯಿಸಬೇಕು. ಇನ್ನೊಂದು ಭಾಗದಲ್ಲಿ ಚಿಗುರಿ ಬೆಳೆಯುತ್ತಿರುವ ಎಳೆಯ ಕೊಂಬೆಗಳು ವಿದ್ಯುತ್ ತಂತಿ ಸ್ಪರ್ಶಿಸುತ್ತಿದ್ದು, ಅವೂ ಅಪಾಯಕ್ಕೆ ಎಡೆಮಾಡಿಕೊಡುವ ಸಾಧ್ಯತೆ ಇದೆ.

–ರಾಜಗೋಪಾಲ ವಾಂಜ್ರೆ, ದಾವಣಗೆರೆ




## ಮಿನಿ ಶುಭಾಶಯ ಪತ್ರ

ಅದೊಂದು ಕಾಲವಿತ್ತು. ದೀಪಾವಳಿ, ಯುಗಾದಿ, ಸಂಕ್ರಾಂತಿ ಮುಂತಾದ ಹಬ್ಬ ಹರಿದಿನಗಳಂದು ಒಬ್ಬರಿಗೊಬ್ಬರು 'ಶುಭಾಶಯ' ಪತ್ರಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಆ ಪತ್ರಗಳು ಜತೆಯಲ್ಲೇ ಹೊತ್ತು ತರುತ್ತಿದ್ದ ಪ್ರೀತಿ, ಪ್ರೇಮ, ವಿಶ್ವಾಸ ಈಗಿನ ವಿಭಿನ್ನವಾದಂಥ ಸನ್ನಿವೇಶದಲ್ಲಿ ನಶಿಸಿಹೋಗಿದೆ. ಅಣ್ಣ ತಂಗಿಗೆ, ಗೆಳೆಯ ಗೆಳತಿಗೆ, ಅಪ್ಪ ಅಮ್ಮ ಮಕ್ಕಳಿಗೆ, ಮಕ್ಕಳು ಹೆತ್ತವರಿಗೆ ಶುಭಾಶಯಗಳನ್ನು ಹಂಚಿಕೊಂಡಾಗ ಆಗುತ್ತಿದ್ದ ಆ ಆನಂದ ಸಂತೋಷಕ್ಕೆ ಮಿತಿಯೇ ಇರುತ್ತಿರಲಿಲ್ಲ. ಈಗ ಸಂಬಂಧಗಳು ಜಾಳಾಗಿರುವ ಕಾಲದಲ್ಲಿ ಆ ರೀತಿಯ ಶುಭಾಶಯ ಪತ್ರಗಳು ಕಾಣೆಯಾಗಿರುವುದು ಖೇದದ ಸಂಗತಿಯೇ ಸರಿ. ಹಳೆಯ ಕಡತವನ್ನು ಜಾಲಾಡಿಸುವಾಗ ಈ ಪುಟ್ಟ ಶುಭಾಶಯ ಪತ್ರ ದೊರಕಿತು. ಇದು 3.5 ಸೆಂ.ಮೀ. ಅಗಲ, 2.5 ಸೆಂ.ಮೀ. ಉದ್ದವಿದೆ.

–ಅರವಿಂದ ದೀಕ್ಷಿತ್, ಚಿಕ್ಕಮಗಳೂರು



## ಇವಳು ಚೇಳುಸುಂದರಿ

ಚೇಳು ಅಂದ್ರೆ ಭಯಪಡುವ ನಾವು ಚೇಳು ಸುಂದರಿ ಎಂದಾಕ್ಷಣ ತಲೆಗೆ ಹುಳಬಿಟ್ಟುಕೊಳ್ಳುವುದು ಸಹಜ. ಜೊತೆಗೆ ಚೇಳುಗಳಲ್ಲಿ ಸುಂದರಿ ಇರಲು ಸಾಧ್ಯವೇ ಎಂಬ ಪ್ರಶ್ನೆಯೂ ಕಾಡುತ್ತದೆ. ಈಚೆಗೆ ಪ್ರವಾಸಕ್ಕೆಂದು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಬಾಗಳಿ ಗ್ರಾಮದಲ್ಲಿರುವ ಕಲ್ಲೇಶ್ವರ ದೇವಾಲಯಕ್ಕೆ ಹೋದಾಗ ಅಲ್ಲಿನ ಅರ್ಚಕರಾದ ಬಸವರಾಜ ಅವರು ಚೇಳುಸುಂದರಿ ಬಗೆಗೆ ಬಂದ ಪ್ರವಾಸಿಗರಿಗೆ ಪರಿಚಯಿಸಿದರು.

ಅವರ ಪರಿಚಯದ ಪರಿ ಹೀಗಿತ್ತು; 'ರಾಜನರ್ತಕಿ ತನ್ನ ಕೋಣೆಯಲ್ಲಿ ನರ್ತನಕ್ಕೆ ವಿಶೇಷ ವಸ್ತ್ರಾಲಂಕಾರ ಮಾಡಿಕೊಳ್ಳುತ್ತಿದ್ದಾಗ ಚೇಳೊಂದು ನರ್ತಕಿಯ ಉಡುಗೆಯಲ್ಲಿ ಸೇರಿಕೊಳ್ಳುತ್ತದೆ. ಅದನ್ನು ಗಮನಿಸಿದ ಆಕೆ ಹೆದರಿಕೆಯಿಂದ ಉಡುಗೆಯನ್ನು ಸಡಿಲಿಸಿ ಎಸೆಯುತ್ತಾಳೆ. ಆಗ ವಸ್ತ್ರದೊಳಗೆ ಸೇರಿಕೊಂಡಿದ್ದ ಚೇಳು ಹೊರಬೀಳುತ್ತದೆ. ವಿವಸ್ತ್ರಳಾದ ನರ್ತಕಿಯ ರೂಪವೇ ಈ ಕೆತ್ತನೆ'... ನರ್ತಕಿಯ ಅಂಗಾಂಗಗಳು, ದಾವಣಿ, ಆಭರಣ ಹಾಗೂ ಕೆಳಭಾಗದಲ್ಲಿ ಕಾಣುವ ಚೇಳು ಎಲ್ಲವೂ ಸೇರಿದಂತೆ ಸೂಕ್ಷ್ಮವಾಗಿ ಕೆತ್ತಲಾದ ಆಕರ್ಷಕ ಶಿಲ್ಪ ಕಲಾಕೃತಿಯ ಹಿನ್ನೆಲೆಯನ್ನು ತಿಳಿದಾಗ 'ಚೇಳು ಸುಂದರಿ' ಯಾರೆಂದು ತಿಳಿಯಿತು.

–ಸೌಮ್ಯ ಶಿಗ್ಗಾಂವಕರ್, ಹಾಸನ